# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:06/2024

ಡಬ್ಲ್ಯೂ.ಡಬ್ಲ್ಯೂ- 1

**<u>ದಿನಾಂಕ 10.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ವಕೀಲರಿಂದಃ**

ಸಂಸ್ಥೆಯ ಸ್ಥಾಯಿ ಆದೇಶದಲ್ಲಿ ವರ್ಗಾವಣೆ ಬಗ್ಗೆ ಒಂದು ಖಂಡಿಕೆ ಇರುತ್ತದೆ ಎಂದರೆ ಸರಿ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕಾರ್ಮಿಕರನ್ನು ವರ್ಗಾವಣೆ ಮಾಡುವ ಪದ್ದತಿ ಇತ್ತು ಎಂದರೆ ಸರಿಯಲ್ಲ. ಶಂಶಾಬಾದ್, ಬೆಂಗಳೂರು ಹಾಗೂ ಮೈಸೂರು ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹಾಗೂ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಪದ್ಧತಿ ಇತ್ತು ಎಂದರೆ ಅಧಿಕಾರಿಗಳ ವಿಚಾರ ಗೊತ್ತಿಲ್ಲ ಆದರೆ ಕಾರ್ಮಿಕರನ್ನು ವರ್ಗಾವಣೆ ಮಾಡುತ್ತಿರಲಿಲ್ಲ ಎನ್ನುತ್ತಾರೆ. ನನಗೆ ನೇಮಕಾತಿ ಆದೇಶವನ್ನು ದಿನಾಂಕಃ 01.10.2006 ರಲ್ಲಿ ನೀಡಿರುತ್ತಾರೆ ಎಂದರೆ ಹೌದು. ದಿನಾಂಕಃ 01.10.2006 ರ ನೇಮಕಾತಿ ಪತ್ರದಲ್ಲಿ ವರ್ಗಾವಣೆ ಬಗ್ಗೆ ಖಂಡಿಕೆ ಇರುತ್ತದೆ ಎಂದರೆ ಹೌದು. ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಮ್ಮ ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದೇವು ಎಂದರೆ ಸರಿ. ಅದೇ ರೀತಿ ಉಳಿದ 1 ನೇ ಪಕ್ಷಗಾರರು ತಮ್ಮ ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದರು ಎಂದರೆ ಸರಿ. ನಾವು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಯಾವುದೇ ಲೋಪ ದೋಷಗಳು ಇರಲಿಲ್ಲ, ಆಡಳಿತ ವರ್ಗದವರು ಯಾವುದೇ ಕಾರಣ ಕೇಳಿ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿ. ಅಂದರೆ ನಾನು ಮಾಡುತ್ತಿದ್ದ ಸೇವೆ ಆಡಳಿತ ವರ್ಗದವರಿಗೆ ಸಮಾದಾನಕರವಾಗಿತ್ತು ಎಂದರೆ ಸರಿ. ನನಗೆ ಮತ್ತು ಪ್ರತಾಪ್ ಹಾಗೂ ನಾಗೇಶ್ ರವರ ಸೇವೆ ಚೆನ್ನಾಗಿದ್ದ ಕಾರಣ ನಮಗೆ ಬಡ್ತಿ ನೀಡಿ ಶಂಶಾಬಾದ್‌ಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಪರಮೇಶ್, ಮಹದೇವ ಸ್ವಾಮಿ ಹಾಗೂ ಮಧು ರವರ ಸೇವೆ ಚೆನ್ನಾಗಿದ್ದ ಕಾರಣ ಅವರಿಗೆ ಶಂಶಾಬಾದ್‌ಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ.

ದಿನಾಂಕಃ11.08.2023 ರಂದು ವರ್ಗಾವಣೆ ಮಾಡಿದಾಗ ಆಡಳಿತ ವರ್ಗದವರು ಶಂಶಾಬಾದ್‌ಗೆ ಬಸ್ ಟಿಕೆಟ್ ಬುಕ್ ಮಾಡಿ ಸಂಬಳ ಕೂಡ ಜಾಸ್ತಿ ಮಾಡಿದ್ದರು ಎಂದರೆ ಸರಿಯಲ್ಲ. ಶಂಶಾಬಾದ್ ನಲ್ಲಿ ಹೋಟೆಲ್ accommodation ಕೂಡ ಬುಕ್ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು  ಪೋಲೀಸ್ ರನ್ನು ಕರೆದು ನಮ್ಮನ್ನು ಗೇಟ್‌ನಿಂದ ಹೊರಗಡೆ ಹಾಕಿಸಿದ್ದರು ಎನ್ನುತ್ತಾರೆ. ನಾವು ವರ್ಗಾವಣೆ ಆದೇಶವನ್ನು ತೆಗೆದುಕೊಳ್ಳದೆ ಗಲಾಟೆ ಮಾಡಿದ್ದ ಕಾರಣ ಪೋಲೀಸರ ಸಹಾಯವನ್ನು ಸಂಸ್ಥೆಯವರು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.  ನಮಗೆ ವರ್ಗಾವಣೆ ಮಾಡಿದಾಗ one time re–location charges ಹಾಗೂ ಒಂದು ವಾರ ವೇತನ ಸಮೇತ ರಜೆ ನೀಡಿದ್ದರು ಎಂದರೆ ಸರಿಯಲ್ಲ. ನಮಗೆ ಎಲ್ಲಾ ಕೊಟ್ಟಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 11.08.2023 ರಂದು ನಮ್ಮನ್ನು ವರ್ಗಾವಣೆ ಮಾಡಿ ಅದೇ ದಿವಸ ನಮ್ಮನ್ನು relieve ಮಾಡಿದ್ದರು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯವರವರಿಗೆ ಬಂದ ಮಾಹಿತಿ ಪ್ರಕಾರ ಶಂಶಾಬಾದ್ ರವರು ನಮಗೆ ಕೆಲಸಕ್ಕೆ ಬಂದು ವರಧಿ ಮಾಡಿಕೊಳ್ಳಿ ಎಂದು ನಮಗೆ ಕರೆದಿದ್ದರೂ ಸಹಾ ನಾವು ಹೋಗಿ ಕೆಲಸಕ್ಕೆ ವರಧಿ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕೆ ಕಾರಣ ಸಮೇತ ಪತ್ರವನ್ನು ನೀಡಿರುತ್ತೇವೆ ಎನ್ನುತ್ತಾರೆ. ನಾವು ಕೊಟ್ಟಿದ್ದ ಕಾರಣ ಸಮಂಜಸವಾಗಿರಲಿಲ್ಲ ಆದ್ದರಿಂದ ನಮ್ಮ ಮೇಲೆ ಆಂತರಿಕ ವಿಚಾರಣೆ ನಡೆಸಿದ್ದರು ಎಂದರೆ ಸಾಕ್ಷಿ ಆಂತರಿಕ ವಿಚಾರಣೆಗೆ ಬರಲು ಆಗುವುದಿಲ್ಲ ಎಂದು ನಾವು ಪತ್ರ ಕೊಟ್ಟಿದ್ದೇವು ಎನ್ನುತ್ತಾರೆ. ಶಂಶಾಬಾದ್ ಘಟಕದಲ್ಲಿ ನಮ್ಮ ವಿರುದ್ಧ ಏಕ ಪಕ್ಷೀಯ ಆಂತರಿಕ ವಿಚಾರಣೆ ನಡೆಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕೂ ಸಹಾ ನಾವು ಪತ್ರ ಕೊಟ್ಟಿದ್ದೇವು ಎನ್ನುತ್ತಾರೆ. ವರ್ಗಾವಣೆ ಆದ ನಂತರ ಶಂಶಾಬಾದ್ ನಲ್ಲಿ ಕೆಲಸಕ್ಕೆ ವರಧಿ ಮಾಡಿಕೊಳ್ಳದೆ ಮೈಸೂರಿನಲ್ಲಿ ಗಲಾಟೆ ಮಾಡಿದ್ದೇವು ಆದ್ದರಿಂದ ನಮ್ಮ ವಿರುದ್ಧ ಸಿವಿಲ್ ದಾವೆ ಸಲ್ಲಿಸಿ ಪ್ರತಿಬಂಧಕ ಆದೇಶ ಪಡೆದಿದ್ದರು ಎಂದರೆ ಸಾಕ್ಷಿ ಪ್ರತಿಬಂಧಕ ಆದೇಶ ಪಡೆದಿದ್ದು ಸರಿ, ಆದರೆ ನಾವು ಗಲಾಟೆ ಮಾಡಿಲ್ಲ ಎನ್ನುತ್ತಾರೆ.

ನಾವು ಪ್ರತಿಬಂಧಕ ಆದೇಶ ಪಡೆದ ನಂತರ ಗಲಾಟೆ ಮಾಡಿಲ್ಲ ಅದಕ್ಕಿಂತ ಮುಂಚೆ ಗಲಾಟೆ ಮಾಡಿದ್ದೇವು ಅದಕ್ಕೆ ಸಂಬಂಧಪಟ್ಟಂತೆ ಭಾವ ಚಿತ್ರಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿಬಂಧಕ್ಕ ಆದೇಶ ರದ್ದು ಮಾಡಿದ್ದೇವು ಎನ್ನುತ್ತಾರೆ. ಆ ಸಂಬಂಧ ನಾನು ದಾಖಲೆ ಹಾಜರು ಮಾಡಿರುತ್ತೀರ ಎಂದರೆ ದಾಖಲೆ ನೋಡಿಲ್ಲ ಎನ್ನುತ್ತಾರೆ.

ಈ ಪ್ರಕರಣದಲ್ಲಿ ನಾನು ದಿನಾಂಕಃ 11.08.2023 ರಂದು ನಮ್ಮನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದು ವಿವಾದ ಎತ್ತಿರುತ್ತೇವೆ ಎಂದರೆ ಸರಿ. ಅದೇ ರೀತಿ ಮೈಸೂರು ಔದ್ಯೋಮಿಕ ನ್ಯಾಯಾಲಯದಲ್ಲಿ ನನ್ನನ್ನು ವರ್ಗಾವಣೆ ಮಾಡಿರುವ ಬಗ್ಗೆ ವಿವಾದ ಎತ್ತಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದ ನೋಟೀಸ್ ಹಾಗೂ ಉಲ್ಲೇಖ ಪ್ರತಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಗಳನ್ನು **ನಿ.ಎಂ.1 ಹಾಗೂ ನಿ.ಎಂ.2** ಎಂದು ಗುರುತಿಸಲಾಯಿತು. ತದನಂತರ ನಮ್ಮನ್ನು ಶಂಶಾಬಾದ್ ಘಟಕದಲ್ಲಿ ಕೆಲಸದಿಂದ ತೆಗೆದಿದ್ದ ಆದೇಶದ ವಿರುದ್ಧ ಮೈಸೂರು ಔದ್ಯೋಮಿಕ ನ್ಯಾಯಾಲಯದಲ್ಲಿ ನಾವು 6 ಜನರು ಕಲಂ 33 ಎ ನಲ್ಲಿ ವಿವಾದ ಎತ್ತಿದ್ದೇವು ಎಂದರೆ ಸರಿ. ಸದರಿ ವಿವಾದ ಇತ್ಯರ್ಥದಲ್ಲಿ ಇದ್ದಾಗ ನಮ್ಮನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದು ಕಲಂ 33 ಎ ನಲ್ಲಿ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ. 2 ನೇ ಪಕ್ಷಗಾರರ ಸಂಸ್ಥೆಯವರು ನಮ್ಮನ್ನು ವರ್ಗಾವಣೆ ಮಾಡಿದ್ದರು ಶಂಶಾಬಾದ್ ಘಟಕದವರು ನಮ್ಮನ್ನು ವಜಾ ಮಾಡಿದ್ದರು ಎಂದರೆ ಸರಿ. ಆಡಳಿತ ವರ್ಗದವರು ಮೈಸೂರಿನ ಘಟಕದಿಂದ ಶಂಶಾಬಾದ್ ಘಟಕಕ್ಕೆ ವರ್ಗಾವಣೆ ಮಾಡಿದು ಕಾನೂನು ಬದ್ಧವಾಗಿರುತ್ತದೆ ನಾವೇ ಕೆಲಸಕ್ಕೆ ಹೋಗಿ ವರಧಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಈಗ ಎನಾದರು ಶಂಶಾಬಾದ್ ಆಡಳಿತ ವರ್ಗದವರು ನಮ್ಮನ್ನು ಕೆಲಸಕ್ಕೆ ಸೇರಿಕೊಂಡರೆ ಹೋಗಲು ತಯಾರಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನಮ್ಮದೆ ಕಾರಣದಿಂದ ಕೆಲಸಕ್ಕೆ ಹೋಗಿ ವರಧಿ ಮಾಡಿಕೊಳ್ಳದೆ ಆಡಳಿತ ವರ್ಗದವರ ಮೇಲೆ ವಿನಾಕಾರಣ ಎತ್ತಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯವನ್ನು ದಾರಿ ತಪ್ಪಿಸಿ ಆದೇಶ ಪಡೆಯುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**